ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 979/2023

(ಫ್ರಾಸಾ-1 ಚಾಸಾ-1)
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 17.03.2026

| | | |
|---|---|---|
| ಸಾಕ್ಷಿದಾರರ ಹೆಸರು | - | ನಾಗೇಶ್ ಕುಮಾರ್ |
| ತಂದೆಯ ಹೆಸರು | - | ಮುನಿಮಾರಪ್ಪ |
| ವಯಸ್ಸು | - | 36 ವರ್ಷ, |
| ಉದ್ಯೋಗ | - | ಖಾಸಗಿ ಕೆಲಸ |
| ವಾಸ | - | ಅತ್ತಿಬೆಲೆ |

<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

ನಾನು ಪರಿಶಿಷ್ಟ ಜಾತಿಯ ಆದಿಕರ್ನಾಟಕ ಸಮುದಾಯಕ್ಕೆ ಸೇರಿರುತ್ತೇನೆ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿತರು ನನಗೆ ಗೊತ್ತು. ಆರೋಪಿತರು ಸಾದರ ಜಾತಿಗೆ ಸೇರಿದವರು.

2. ನಾನು ಅತ್ತಿಬೆಲೆಯಲ್ಲಿ ವೆಂಕಟೇಶ್ವರ ಕೇಬಲ್ ನೆಟ್‌ವರ್ಕಿಂಗ್ ನಲ್ಲಿ ಈಗ ಸುಮಾರು ಆರು ವರ್ಷಗಳಿಂದ ನೆಟವರ್ಕ್ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದೇನೆ. ದಿಃ14.04.2023 ರಂದು ಮಧ್ಯಾಹ್ಞ 03.30 ಘಂಟೆ ಸಮಯದಲ್ಲಿ ಅತ್ತಿಬೆಲೆ ಸರ್ಜಾಪುರ ರಸ್ತೆಯಲ್ಲಿರುವ ಮುರುಳಿ ಎನ್ನುವವರ ಮನೆಗೆ ಹೊಸ ನೆಟವರ್ಕ್ ಕನೆಕ್ಷನ್ ಅನ್ನು ನಾನು ಕೊಡುತ್ತಿರುವಾಗ ನನ್ನ ಜೊತೆ ಚಾಸಾ-2 ರಿಂದ 4, 6 ಸಹ ಇದ್ದರು. ಆರೋಪಿತರು ಸದರಿ ಕೆಲಸಕ್ಕೆ ಅಡ್ಡಪಡಿಸಿ ಕನೆಕ್ಷನ್ ಕೊಡಬೇಡಿ ಎಂದು ಹೊಲೆಯ ನನ್ನ ಮಕ್ಕಳಾ, ನಿಮ್ಮನ್ನು ಪೋಲಿಸರಿಗೆ ಹೇಳಿ ಒಳಗಡೆ ಹಾಕಿಸುತ್ತೇನೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಜಾತಿ ನಿಂದನೆ ಮಾಡಿ ಬೆದರಿಕೆ ಹಾಕಿರುತ್ತಾರೆ. ಮೀಷನ್ ಬಾಕ್ಸ್ ಅನ್ನು ಒಡೆದು ಹಾಕಲು ಹೋಗಿದ್ದರು. 1 ನೇ ಆರೋಪಿಯು ಕೈಯಿಂದ ನನ್ನ ಕಪಾಳಕ್ಕೆ ಹೊಡೆದರು.

3. ಈ ಬಗ್ಗೆ ನಾನು ಪೋಲಿಸರಿಗೆ ಅದೇ ದಿನ ದೂರು ನೀಡಿರುತ್ತೇನೆ. ಈಗ ನಾನು ದೂರನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ದೂರನ್ನು ನಿಪಿ-1 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರ್ತಿಸಲಾಯಿತು.

4. ದೂರು ಕೊಟ್ಟ ನಂತರ ಪೋಲಿಸರು ಗಲಾಟೆ ನಡೆದ ಸ್ಥಳಕ್ಕೆ ಬಂದು ಪಂಚನಾಮೆ ಮಾಡಿ ಸ್ಥಳದಲ್ಲಿ ಫೋಟೋ ತೆಗೆದರು. ಈಗ ನಾನು ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ಪಂಚನಾಮೆಯನ್ನು ನಿಶಾನೆ ಪಿ-2 ಎಂದು ಹಾಗೂ ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಶಾನೆ ಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಎರಡು ಫೋಟೋಗಳನ್ನು ನೋಡಿ ಗುರುತಿಸಿದ್ದು ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು.

5. ಚಾಸಾ-2 ರಿಂದ 5 ಇವರು ನೆಟವರ್ಕ್ ಇಂಜಿನಿಯರ್ ಆಗಿ ಕಾರ್ಯನಿರ್ವಹಿಸುತ್ತಾರೆ. ಸಾಕ್ಷಿಯ ಐಡಿ ಕಾರ್ಡ್ ನ ನಕಲನ್ನು ತೋರಿಸಿದ್ದು ಅದು ತನ್ನ ಐಡಿ ಕಾರ್ಡ್ ಇರುತ್ತದೆ ಎಂದು ನೋಡಿ ಗುರುತಿಸಿರುತ್ತಾರೆ. ಅದು ಜೆರಾಕ್ಸ್ ನಕಲು ಆಗಿರುವುದರಿಂದ ನಿಶಾನೆಯಾಗಿ ಗುರುತಿಸಿರುವುದಿಲ್ಲ. ನಾನು ಪೋಲಿಸರಿಗೆ ಮರುಹೇಳಿಕೆ ನೀಡಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಡಿ ಸಿ ವಕೀಲರಿಂದಃ</u>**

ಆರೋಪಿ ಪರ ವಕೀಲರು ಸಿ.ಆರ್.ಪಿ.ಸಿ ಕಲಂ 231(2) ರ ಅಡಿ ಅರ್ಜಿ ಸಲ್ಲಿಸಿ ಚಾಸಾ-2 ರಿಂದ 5 ರವರ ಮುಖ್ಯ ವಿಚಾರಣೆಯ ನಂತರ ಎಲ್ಲಾ ಚಾಸಾ-1 ರಿಂದ 5 ರವರ ಪಾಟೀ ಸವಾಲು ಮಾಡಲು ಸಮಯ ಕೋರುತ್ತಾರೆ. ಚಾಸಾ-1 ರಿಂದ 5 ಇವರು ಒಂದೇ ನೆಟ್‌ವರ್ಕ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು ಒಂದೇ ರೀತಿಯ ದೂರು / ಹೇಳಿಕೆಯನ್ನು ನೀಡಿರುತ್ತಾರೆ. ಆದ ಕಾರಣ ಅರ್ಜಿಯನ್ನು ಮಾನ್ಯಗೊಳಿಸಿ ಪಾಟೀ ಸವಾಲಿಗೆ ಮುಂದೂಡಲಾಯಿತು.

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು